'ನೀನಾಸಂ' ಒಡನಾಟದಿಂದಾಗಿ ರಂಗಭೂಮಿ, ಸಾಹಿತ್ಯ ಹಾಗೂ ಸಿನಿಮಾದಲ್ಲಿ ಆಸಕ್ತಿ ಹೊಂದಿರುವ ವಿನ್ಯಾಸ ಹೆಗಡೆ ಅವರ ಊರು ಸಾಗರ ತಾಲ್ಲೂಕಿನ ಹೆಗ್ಗೋಡು ಸಮೀಪದ ಮುಂಡಿಗೇಸರ. ಬೆಂಗಳೂರು ವಿಶ್ವವಿದ್ಯಾಲಯದಿಂದ ವಿದ್ಯುನ್ಮಾನ ಮಾಧ್ಯಮ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಮಣಿಪಾಲ ವಿಶ್ವವಿದ್ಯಾಲಯದ ಸಮೂಹ ಮಾಧ್ಯಮ ಸಂಸ್ಥೆಯಲ್ಲಿ ಸುಮಾರು ಹತ್ತು ವರ್ಷಗಳ ಪ್ರಾಧ್ಯಾಪಕ ವೃತ್ತಿ ನಡೆಸಿ, ಪ್ರಸ್ತುತ ಆಸ್ಟ್ರೇಲಿಯಾದ ಮೆಲ್ಬರ್ನ್ ನಗರದಲ್ಲಿ ವಾಸವಿದ್ದು ಡೀಕನ್ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ವ್ಯಾಸಂಗ ಮಾಡುತ್ತಿದ್ದಾರೆ. ಕಥೆ, ಕವಿತೆಗಳನ್ನು ಬರೆಯುತ್ತಾ ಕನ್ನಡ ಸಾಹಿತ್ಯ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ. ಫೋಟೊಗ್ರಫಿ ಅವರಿಗಿಷ್ಟ. ಸಾಕ್ಷ್ಯಚಿತ್ರ ತಯಾರಿಕೆಯಲ್ಲಿಯೂ ಅನುಭವಿ.

ಕಷ್ಟವಾಗಿತ್ತು. ಬಂದ ಮೊದಲ ದಿನವೇ ಜರುಗಿದ ಘಟನೆಗೆ ನಿಗಿನಿಗಿ ಕೆಂಡವಾಗಿದ್ದಳು. ಪುಟ್ಟನೂ ಪೆಚ್ಚಾಗಿದ್ದ. ಅಷ್ಟರಮೇಲೆ ಊರ್ಮಿಯನ್ನು ಪುಟ್ಟ ಕಣಕ್ಕೆ ಕರೆದುಕೊಂಡು ಹೋಗಬಾರದಿತ್ತು. ಇಬ್ಬರೂ ಸುಮ್ಮನೇ ಮನೆಯಲ್ಲಿಯೇ ಕೂತಿರಬೇಕಿತ್ತೆಂದು ಪುಟ್ಟನ ದೊಡ್ಡಣ್ಣ ಉಪದೇಶಿಸಿದ್ದು ಊರ್ಮಿಯನ್ನು ಇನ್ನಷ್ಟು ಕ್ರುದ್ಧಗೊಳಿಸಿತ್ತು. ಆಕೆಯ ಕ್ರಾಂತಿಕಾರಿ ಮನಸ್ಸು ಮತ್ತು ಕುದಿಯುತ್ತಿದ್ದ ವಯಸ್ಸು ಎರಡೂ ಪ್ರಚಂಡ ಆಕ್ರೋಶದಲ್ಲಿ ಕಾಯುತ್ತಿದ್ದವು. ಊರ್ಮಿಯ ಮೈಕೈಗೆಲ್ಲಾ ಮುಳ್ಳು ತರಚಿ ಗಾಯವಾಗಿದ್ದನ್ನು ಕಂಡಿದ್ದ ಪುಟ್ಟನ ಅಮ್ಮ ತೆಂಗಿನಕಾಯಿ ಕುದಿಸಿ ಮಾಡಿದ ಗಾಯದೆಣ್ಣೆ ಬಳಿದು ಸಂತೈಸಿದರು. ಮಾರನೆಯ ಬೆಳಗ್ಗೆ ಊರ್ಮಿಯ ದೇಹದ ಗಾಯ ವಾಸಿಯಾಗಿತ್ತಾದರೂ ಮನಸ್ಸಿನ ಗಾಯ ಉರಿಯುತ್ತಲೇ ಇತ್ತು.

ಊರ್ಮಿ, ಸೂರಣ್ಣರ ಮಾತುಕತೆ ಚಕಮಕಿಯ ರೂಪತಾಳಿ ಊರು ತುಂಬಾ ಹಬ್ಬಿತ್ತು. ಪುಟ್ಟನನ್ನು ಚೆನ್ನಾಗಿ ಅರಿತಿದ್ದ ಪುಟ್ಟನ ಬಾಲ್ಯ ಸಖನ ಕಿವಿಗೂ ಆ ಗಾಳಿಸುದ್ದಿ ಬಿದ್ದಿತ್ತು. ಆತ ಮನೆಗೆ ಬಂದು ತನ್ನ ಬಗ್ಗೆಯೂ ಊರವರೆಲ್ಲಾ ಇಲ್ಲ ಸಲ್ಲದ ಮಾತುಗಳನ್ನು ಆಡುತ್ತಾರೆಂದು ಊರ್ಮಿಗೆ ಸಮಾಧಾನ ಹೇಳಿದ. ಊರಿನ ಇನ್ನೊಂದು ಮುಖವನ್ನು ನೋಡುವ ಆಸಕ್ತಿಯಿದ್ದರೆ ತನ್ನ ಜತೆ ಬರಬೇಕೆಂದು ಆಹ್ವಾನಿಸಿದ. ಪುಟ್ಟನಿಗಿಂತಲೂ ಊರಿನ ಜನರ ಒಡನಾಟ ಪುಟ್ಟನ ಸಖನಿಗೇ ಚೆನ್ನಾಗಿತ್ತು. ಮೇಲಾಗಿ ಆತ ಪುಟ್ಟನಂತೆ ಊರು ತೊರೆಯದೇ ಅದೇ ಊರಲ್ಲಿ ವಾಸವಾಗಿದ್ದ. ಮೇಲಿನ ಕೇರಿಯ ಶಾಲೆಯ ಪಕ್ಕದಲ್ಲಿತ್ತು ಅವನ ಮನೆ.

ಮಾರನೆಯ ಸಂಜೆ ಊರ್ಮಿ, ಪುಟ್ಟ ಮತ್ತು ಪುಟ್ಟನ ಸಖ ಮೂವರೂ ಊರು ಸುತ್ತಲು ಹೊರಟರು. ಪುಟ್ಟನ ಸಖನ ಮಾತಿಗೆ ವಿರುದ್ಧವಾಗಿ ಊರ್ಮಿ ಕೆಳಗಿನ ಕೇರಿಯ ಕಡೆಗೆ ಮೊದಲು ನಡೆಯುವುದೆಂದು ತೀರ್ಮಾನಿಸಿದಳು. ಊರಿಗೆ ಅಪರೂಪವಾದ ಪುಟ್ಟ, ಕೆಳಗಿನಕೇರಿಯನ್ನು ಅಷ್ಟಾಗಿ ಹಚ್ಚಿಕೊಂಡಿರದ ಪುಟ್ಟನ ಸಖ ಮತ್ತು ಹೊರಗಿನವಳಂತೆ ಕಾಣುವ ಊರ್ಮಿ, ರಸ್ತೆಯಲ್ಲಿ ನಡೆದು ಹೋಗುತ್ತಿರುವುದನ್ನು ನೋಡಿದ ಜನರಿಗೆ ಕುತೂಹಲದ ಕಟ್ಟೆ ಒಡೆದುಹೋಗಿತ್ತು. ಮನುಷ್ಯ ಸಹಜ ಕೌತುಕಕ್ಕಿಂತ ಮಿಗಿಲಾಗಿ ಕೆದಕಿ ನೋಡುವ ಕೆಟ್ಟ ಅನುಭವವೊಂದು ಊರ್ಮಿಯ ಅರಿವಿಗೆ ಬರತೊಡಗಿತ್ತು. ಮನಸ್ಸನ್ನು ಬೇರೆಡೆಗೆ ತಿರುಗಿಸಲು ಕೆಳಗಿನ ಕೇರಿಯ ಕಲವೇ ಕೆಲವು ಹಳೇ ಮನೆಗಳನ್ನು ಮತ್ತು ಇತ್ತೀಚೆಗೆ ಕಟ್ಟಿಸಿದ ಹೊಸ ತಾರಸಿ ಮನೆಗಳನ್ನು ಊರ್ಮಿ ಅವಲೋಕಿಸುತ್ತಿದ್ದಳು. ಹಳೇಮನೆಯ ಮರದ ಕಂಬಗಳು ಅವಳನ್ನು ಸೆಳೆದವು. ಆ ಎತ್ತರದ ಹಳೇ ಮನೆಯೊಳಗಡೆ ಯಾವುದೋ ಕಾಲದಲ್ಲಿ ಭವಂತಿಯ ಸುತ್ತಾ ಆಟವಾಡುತ್ತಿದ್ದ ಚಿಕ್ಕ ಮಕ್ಕಳನ್ನು ಪಾಠಶಾಲೆಯ ಗುಮ್ಮ ಬಂದು ಕದ್ದೊಯ್ದಿರಬಹುದೇ ಅಥವಾ ಹಿತ್ತಿಲ ಮೂಲೆಯ ಬಾವಿಯ ಸುತ್ತ ಹೆಂಗಸರು ನಿಂತು ಕಷ್ಟಸುಖ ಹಂಚಿಕೊಂಡಿದ್ದೇ ತಪ್ಪು ಎಂದು ಗಂಡಸರು ಥಳಿಸಿರಬಹುದೇ ಎಂದು ಊರ್ಮಿ ಯೋಚಿಸುತ್ತಿದ್ದಳು. ಎಲ್ಲರ ಮನೆಯ ದನದ ಹಟ್ಟಿಗಳೂ ಖಾಲಿಯಾಗಿ ಅಲ್ಲಿ ಬಗೆಬಗೆಯ ಕಾರು ಅಥವಾ ಬೈಕುಗಳು ನಿಂತಿದ್ದವು. ಕೆಳಗಿನ ಕೇರಿಯ ಗಂಡಸರು ಮನೆಯೆದುರಿನ ರಸ್ತೆಯಲ್ಲೇ ನಿಂತು ಪುಟ್ಟ ಮತ್ತು ಪುಟ್ಟನ ಸಖನ ಕಾರ್ಯಭಾರ ವಿಚಾರಿಸುತ್ತಿದ್ದರು. ಅವರ ಕಣ್ಣುಗಳು ಊರ್ಮಿಯ ಮೇಲೇ ನೆಟ್ಟಿರುತ್ತಿದ್ದುದು ಊರ್ಮಿಗೆ ಹೇವರಿಕೆಯುಂಟುಮಾಡಿತ್ತು. ಊರ್ಮಿಯದೇ